ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 6, MAY-JUNE 2022, Pp. 19-26.
©*IIMRD*, Mysuru
IIMRD JOURNALS
www.iimrd.com

# ಚಾಮರಾಜನಗರ ಗೊರವರ ಜನಪದ ಆಚರಣೆ ಮತ್ತು ನಂಬಿಕೆಗಳು

**ಪುಷ್ಪ[*] ಮತ್ತು ಡಾ. ವಿಜಯಲಕ್ಷ್ಮಿ ಮನಾಪುರ[**]**
[*]ಜಾನಪದ ಸಂಶೋಧನಾ ವಿದ್ಯಾರ್ಥಿನಿ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.
[**]ಸಹ ಪ್ರಾಧ್ಯಾಪಕರು, ಜಾನಪದ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

**ಸಾರಾಂಶ: (Abstract)**

*ಚಾಮರಾಜನಗರ ಜಿಲ್ಲೆಯು ಕರ್ನಾಟಕ ದಕ್ಷಿಣ ಭಾಗದಲ್ಲಿದ್ದು, ಜನಪದ ಕಲೆಗಳ ತವರೂರಾಗಿದೆ. ಅನೇಕ ಜನಪದ ಕಲೆಗಳಲ್ಲಿ ಗೊರವ ಕುಣಿತ ಅತ್ಯಂತ ಪ್ರಮುಖವಾದವುಗಳಲ್ಲಿ ಒಂದಾಗಿದೆ. ಗೊರವರ ಕುಣಿತ ಮತ್ತು ಆಚರಣೆಗಳು ಆದಿಮ ಸಂಸ್ಕೃತಿಯ ಪಳೆಯುಳಿಕೆಗಳ ಪ್ರತೀಕಗಳಾಗಿವೆ. ಕಾಡಿನ ಸಂಸ್ಕೃತಿಯು ನಾಡಿನ ಸಂಸ್ಕೃತಿಯೊಂದಿಗೆ ಕೈಗೂಡಿಸುವ ಹಂತದ ಆಚರಣೆಗಳು ಇಲ್ಲಿ ಗೋಚರವಾಗುತ್ತವೆ. ಬೇಟೆ ಮತ್ತು ಪಶುಪಾಲನಾ ಸಂಸ್ಕೃತಿಯ ಮೇಳೈಕೆ ಗೊರವರಲ್ಲಿ ಕಂಡುಬರುತ್ತದೆ. ಗೊರವರು ನಡೆಸುವ ಪವಾಡಗಳು, ಮಣೇವು, ಭಂಡಾರ ಪೂಜೆ, ವೃಕ್ಷಾರಾಧನೆ ಪ್ರಾಣಿ ಆರಾಧನೆ, ಐತಿಹ್ಯಗಳು, ಕರಿಯ ಕಂಬಳಿ ಧರಿಸುವುದು ಮುಂತಾದವು ಬೇಟೆ ಮತ್ತು ಹೈನುಗಾರಿಕೆ ಸಂಸ್ಕೃತಿಯ ಮೂಲಾಂಶಗಳಾಗಿವೆ. ಈ ಸಂಸ್ಕೃತಿಯ ಕಾಲವ್ಯಾಪ್ತಿ, ಪ್ರದೇಶ ವ್ಯಾಪ್ತಿ, ಕುಲಸಂಕೇತಗಳು, ಆಚರಣೆ ವೈವಿಧ್ಯಗಳನ್ನು ಗಮನಿಸಿದಾಗ ಆಗಮಿಕ ಸಂಸ್ಕೃತಿಗಿಂತ ಪ್ರಾಚೀನವಾದ ಸಾಂಸ್ಕೃತಿಕ ಪದರಗಳು ಅನಾವರಣಗೊಳ್ಳುವುದನ್ನು ಕಾಣಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಗೊರವರ ಜಾನಪದ ಆಚರಣೆ ಮತ್ತು ನಂಬಿಕೆಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಗೊರವರು, ಚಾಮರಾಜನಗರ, ಜನಪದ, ಆಚರಣೆ, ನಂಬಿಕೆಗಳು.

**ಪೀಠಿಕೆ**

ವ್ಯಕ್ತಿಯ ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳೇ ಜೀವನಾರ್ತನ ವಿಧಿಗಳು, ಮಗು ಹುಟ್ಟಿದಾಗ, ಹೆಣ್ಣುಮಗಳು ಮೈನೆರೆದಾಗ, ವಿವಾಹ, ಸೀಮಂತ, ಸಾವು ಮುಂತಾದ ಸಂದರ್ಭದಗಳಲ್ಲಿ ಹಲವು ಬಗೆಯ ಆಚರಣೆಗಳನ್ನು ಇದು ಒಳಗೊಂಡಿರುತ್ತದೆ. ಪ್ರತಿಯೊಂದು ಸಮುದಾಯವು ತಮ್ಮದೇ ಆದ ಜೀವನಾವರ್ತನ ಆಚರಣೆ ಅಥವ ವಿಧಿಗಳನ್ನು ಅನುಸರಿಸಿಕೊಂಡು ಬಂದಿವೆ. ಬೇಡರು, ಬೆಸ್ತರು, ಕುರುಬರು, ಹರಿಜನ, ಒಕ್ಕಲಿಗರು, ಲಿಂಗಾಯಿತರು ಹೀಗೆ ಗೊರವ ಸಂಸ್ಕೃತಿಯಲ್ಲಿ ಬೆರೆತಿರುವ ಎಲ್ಲಾ ಸಮುದಾಯದವರು ತಮ್ಮ ಕುಲಗಳಿಗೆ ಸೇರಿದ ಧಾರ್ಮಿಕ ಆಚರಣೆಗಳನ್ನೆ ಉಳಿಸ ಬೆಳೆಸಿಕೊಂಡು ಬಂದಿರುವ ಕಾರಣ, ಗೊರವರ ಜೀವನಾವರ್ತನ ಆಚರಣೆಗಳಲ್ಲಿ ಏಕತೆಯಾಗಲಿ, ವೈಶಿಷ್ಟವಾಗಲಿ ಗೋಚರಿಸುವುದಿಲ್ಲ ಆದಾಗ್ಯೂ ಸಂಸ್ಕೃತಿಯ ಎಳೆಯೊಂದು ಸಮಾನವಾಗಿ ಈ ಎಲ್ಲಾ ಸಮುದಾಯಗಳನ್ನು ಒಂದೇ ಸೂತ್ರದಲ್ಲಿ

*Please cite this article as: ಪುಷ್ಪ ಮತ್ತು ವಿಜಯಲಕ್ಷ್ಮಿ ಮನಾಪುರ* (2022). ಚಾಮರಾಜನಗರ ಗೊರವರ ಜನಪದ ಆಚರಣೆ ಮತ್ತು ನಂಬಿಕೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(6). ಪು.ಸಂ.* 35–42.

ಪೋಣಿಸುವ ಕಾರಣದಿಂದಾಗಿ ಸಾಧಾರಣವಾಗಿ ಅನುಸರಿಸಲಾಗುವ ಆಚರಣೆಗಳನ್ನು ಗುರುತಿಸಲು ಇಲ್ಲಿ ಯತ್ನಿಸಲಾಗಿದೆ

**ಜನನ ಸಂಸ್ಕಾರ ಮತ್ತು ನಾಮಕರಣ**

ಗೊರವರ ಮನೆಯಲ್ಲಿ ಮಕ್ಕಳು ಹುಟ್ಟಿದಾಗ ಮೊದಲಿಗೆ ಶುದ್ದಿ (ಸೂತಕ ತೆಗೆಯುವುದು) ಮಾಡುತ್ತಾರೆ. ಅಂದರೆ ಮಗು ಹುಟ್ಟಿದ ಮೂರು ದಿನಕ್ಕೆ ಗೋಮೂತ್ರ ಬೇವಿನ ಸೊಪ್ಪಿನ ರಸದೊಂದಿಗೆ ಅರಿಶಿನ ಅರೆದು ಮಗುವಿಗೆ ಕುಡಿಸಿ ಶುದ್ದಿ ಮಾಡುತ್ತಾರೆ.ಶುದ್ಧಿ ಮಾಡುವುದರ ಜೊತೆಗೆ ಜನನದ ಸೂತಕ ಕಳೆಯಿತೆಂದು ಗೊರವರು ಭಾವಿಸುತ್ತಾರೆ.ಐದು, ಏಳು ಅಥವಾ ಒಂಬತ್ತು ದಿನಗಳ ನಂತರ ಗುರುವಿನಿಂದ ಇಲ್ಲವೇ ಗಣಾಚಾರಿಂದ ಮಗುವಿಗೆ ಭಂಡಾರ ಧಾರಣೆ ಮಾಡಿಸುತ್ತಾರೆ.ಏಳು ಅಥವಾ ಒಂಬತ್ತು ದಿನಗಳಿಗೆ ಕುಲಸ್ಥರನ್ನೆಲ್ಲ ಕರೆದು ಏಳು ಜನ ಗೊರವರಿಗೆ  ದೋಣಿ ತುಂಬಿಸಿ ಮಗುವಿಗೆ ಉಡಿದಾರ ಕಟ್ಟಿ ನಾಮಕರಣ ಮಾಡುತ್ತಾರೆ. ಮಕ್ಕಳಿಗೆ ಮೈಲಾರಲಿಂಗನ ಹೆಸರಿಗೆ ಹೊಂದುವಂತೆ ಚಿಕ್ಕಮಲ್ಲಯ್ಯ, ದೊಡ್ಡಮಲ್ಲಯ್ಯ, ಕೆಂಚಮಲ್ಲಯ್ಯ, ಮೈಲಾರಯ್ಯ ಇತ್ಯಾದಿ ಹೆಸರುಗಳನ್ನಿಡುತ್ತಾರೆ.ಗೊರವರಲ್ಲಿ ತೊಟ್ಟಿಲು ಕಟ್ಟುವುದು ರೂಢಿಯಲ್ಲಿದೆ.ಉಳಿದಂತೆ ಆಯಾಯ ಸಮುದಾಯ ಅಥವ ಕುಲದಲ್ಲಿ ಕಂಡು ಬರುವ ಆಚರಣೆಗಳು ನಡೆಯುತ್ತದೆ.

**ಋತುಮತಿ/ಪ್ರೌಢಾವಸ್ಥೆ ಆಚರಣೆ**

ಹೆಣ್ಣು ಮಗಳು ಋತುಮತಿಯಾದಾಗ "ಗುಡ್ಲು" ಕೊಡುತ್ತಾರೆ. ತೆಂಗಿನ ಸೋಗೆಗಳಿಂದ ಹೆಣೆದ ಹಂದರವನ್ನು ತ್ರಿಕೋನಾಕಾರದಲ್ಲಿ ಚಪ್ಪರ ಕಟ್ಟಿ ನಿಲ್ಲಿಸಿ ಅದರಲ್ಲಿ ಮೂರು ದಿನಗಳ ಕಾಲ ಹೆಣ್ಣು ಮಗಳನ್ನು ಹಗಲು ರಾತ್ರಿ ಕೂರಿಸುತ್ತಾರೆ. ಈ ಗುಡ್ಲು ಮನೆಯಿಂದ ಅನತಿ ದೂರದಲ್ಲಿತ್ತದೆ. ಮೂರು ದಿನಗಳ ಸೂತಕ ಕಳೆದ ಮೇಲೆ ಸ್ನಾನ ಮಾಡಿಸಿ ಮನೆಗೆ ಕರೆತಂದು ದೇವರನ್ನು ಪೂಜಿಸಿ ಹೆಣ್ಣು ಮಗಳಿಗೆ ಆರತಿ ಎತ್ತುತ್ತಾರೆ.ಈ ಸಂದರ್ಭದಲ್ಲಿ ಗೊರವ, ಗೊರವಿಯರು ಸೇರಿರುತ್ತಾರೆ. ಗಣಾಚಾರಿ ನೇತೃತ್ವದಲ್ಲಿ ಈ ಎಲ್ಲಾ ವಿಧಿಗಳು ನೆರವೇರುತ್ತವೆ.

**ವಿವಾಹ ಪದ್ಧತಿ**

ಬಹುತೇಕ ಎಲ್ಲಾ ಸಂಸ್ಕೃತಿಗಳಲ್ಲೂ ವಿವಾಹದ ಉದ್ದೇಶ ಒಂದೇ ಆಗಿದ್ದರೂ ಅದಕ್ಕೆ ಸಂಬಂಧಿಸಿದ ಆಚರಣೆ ಮಾತ್ರ ವಿಭಿನ್ನ ಸ್ವರೂಪಗಳಿಂದ ಕೂಡಿರುತ್ತದೆ. ನಿರ್ದಿಷ್ಟ ಸಂಸ್ಕೃತಿಯೊಂದರಲ್ಲಿ ಜರುಗುವ ಮದುವೆ ಆಚರಣೆಯ ಅಧ್ಯಯನವೆಂದರೆ ಆ ಸಾಂಸ್ಕೃತಿಕ ಅಧ್ಯಯನವೇ ಆಗಿರುತ್ತದೆ.ಏಕೆಂದರೆ ಮದುವೆ ಆಯಾ ಜನಾಂಗದ ಸಾಂಸ್ಕೃತಿಕ ಕ್ರಿಯೆಯಾಗಿದ್ದು, ಇಡೀ ಸಮುದಾಯವೇ ಆ ಕ್ರಿಯೆಯಲ್ಲಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳುತ್ತದೆ. ಸಂಮಿಶ್ರ ಸಂಸ್ಕೃತಿಯ ಗೊರವರಲ್ಲಿ ಮದುವೆ ಆಯಾ ಕುಲದ ಆಚರಣೆಗಳಿಗನುಸಾರವಾಗಿ ನಡೆಯುತ್ತಾದರೂ, ಗೊರವರು ಕಾರಹುಣ್ಣಿಮೆಗೆ ಮೊದಲೆ ಲಗ್ನ ಮಾಡಿಕೊಳ್ಳುವುದು ರೂಢಿಯಲ್ಲಿದೆ. ದೇವರ ಗುಡ್ಡದಲ್ಲಿ ಕಾರಹುಣ್ಣಿಮೆಯಲ್ಲಿ ಮೈಲಾರಲಿಂಗನ ಲಗ್ನದ ವಿಧಿಗಳು ಜಗುವುದರಿಂದ ತಮ್ಮ ದೇವರ ಲಗ್ನದ ತರುವಾಯ ತಾವು ಮದುವೆ ಮಾಡಿಕೊಳ್ಳುವುದು ಒಳ್ಳೆಯದಲ್ಲವೆಂದು ಗೊರವರ ನಂಬಿಕೆ. ಸಾಮಾನ್ಯವಾಗಿ ಗಂಡು ಮಕ್ಕಳಿಗೆ ದೀಕ್ಷೆಯಾದ ಮೇಲೆಯೇ ಮದುವೆ ಮಾಡುವುದು.

ಗೊರವರು ಹೆಣ್ಣು ನೋಡಲು ಹೋಗುವ ಮೊದಲು ಗುರುಬಲ (ಶಾಸ್ತ್ರ) ಕೇಳುತ್ತಾರೆ.ಇದು ಸರಿ ಹೊಂದಿದ ಮೇಲೆ ಹೆಣ್ಣು ನೋಡಲು ಹೋಗುತ್ತಾರೆ. ಹೆಣ್ಣು ನೋಡಲು ಹೊರಟಾಗ ಆ ಹೆಣ್ಣು ಕಸ ಗುಡಿಸುತ್ತಿದ್ದರೆ, ತಲೆ ಬಾಚಿಕೊಳ್ಳುತ್ತಿದ್ದರೆ, ಊಟ ಮಾಡುತ್ತಿದ್ದರೆ, ಖಾಲಿ ಕೊಡವನ್ನು ಹಿಡಿದು ಎದುರು ಬಂದರೆ ಶುಭಲಕ್ಷಣವಲ್ಲ ಎಂದು ಭಾವಿಸುತ್ತಾರೆ. ಬದಲಾಗಿ ಹೆಣ್ಣು ಮಗುವೊಂದನ್ನು ಎತ್ತಿಕೊಂಡು ಬಂದರೆ ತುಂಬಿದಕೊಡ ತೆಗೆದುಕೊಂಡು ಎದುರಾದರೆ, ಪೂಜೆ ಮಾಡುತ್ತಿದ್ದರೆ, ಅಡುಗೆ ಮಾಡುತ್ತಿದ್ದರೆ, ಅಂತಹ ಹೆಣ್ಣಿನಿಂದ ಮನೆತನ ಬೆಳೆಯುತ್ತದೆಂದು ಸಾಮಾನ್ಯವಾಗಿ ಎಲ್ಲಾ ಗೊರವರೂ ನಂಬುತ್ತಾರೆ. ಹೆಣ್ಣಿನ ಲಕ್ಷಣಗಳು ಸರಿಹೊಂದಿ ಒಪ್ಪಿಗೆಯಾದರೆ ಆಕೆಯ ಮಡಿಲಿಗೆ ಕೊಬ್ಬರಿ, ಕಲ್ಲು ಸಕ್ಕರೆ, ಎಲೆ–ಅಡಿಕೆ, ಬಾಳೆಹಣ್ಣು, ಹೂ ತುಂಬುತ್ತಾರೆ. ಹೆಣ್ಣಿನ ಬಾಯಿಗೆ ಸಕ್ಕರೆ ಹಾಕಿ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾರೆ.

ವಿವಾಹ ಪೂರ್ವ ಐದು ದಿನಗಳ ಮೊದಲು ತಮ್ಮ ಆರಾಧ್ಯ ದೈವವಾದ ಮೈಲಾರ ಲಿಂಗನಿಗೆ ದೋಣಿ ಸೇವೆ ಮಾಡಿ ಹಣ್ತುಪ್ಪ ಬಡಿಸುತ್ತಾರೆ.ಅಂದು ದಾಸಯ್ಯನ ಬನವಾಶಿಗೆ ಜೋಗಪ್ಪನ ಪಾತ್ರೆಗೆ ಹಣ್ತುಪ್ಪ ತುಂಬುವುದೂ ಉಂಟು. ಮದುವೆಯಲ್ಲಿ ಗೊರವರು ಹಾಜರಿರಬೇಕು ಮತ್ತು ಖಡ್ಗ ಸಾರಬೇಕು.ಮಣೇವು ಹಾಕುವುದೂ ಸಹ ರೂಢಿಯಲ್ಲಿದೆ. ದಕ್ಷಿಣ ಕರ್ನಾಟಕದ ಗೊರವರಲ್ಲಿ ಹಿರಿಯ ಸೊಸೆಗೆ ಮಾಂಗಲ್ಯಧಾರಣೆಯಾದ ಮೇಲೆ ಹೆಣ್ಣು ತನ್ನ ಓಲೆಗಳನ್ನು ತೆಗೆದಿಡಬೇಕು. ಲಗ್ನ ಮುಗಿದು ಗಂಡನ ಮನೆ ಸೇರಿದ ಮೇಲೆ ಅವಳು ಸಂಪೂರ್ಣವಾಗಿ ತವರಿನ ಸಂಬಂಧವನ್ನು ಕಡಿದುಕೊಳ್ಳುತ್ತಾಳೆ. ತವರು ಮನೆಗೆ ಹೋದರೂ ಸಹ ಒಳಗೆ ಹೋಗುವಂತಿಲ್ಲ, ಆಹಾರ ಪಾನೀಯಗಳನ್ನು ಸ್ವೀಕರಿಸುವಂತಿಲ್ಲ. ಏನೇ ಕೆಲಸವಿದ್ದರೂ ಹೊರಗಡೆಯೇ ಕುಳಿತು ಮಾತನಾಡಿ ಗಂಡನ ಮನೆಗೆ ವಾಪಸ್ಸಾಗಬೇಕು.

ಗೊರವರ ಗುರುಗಳಾದ "ಒಡೆಯರು" ತಮ್ಮ ಮನೆಗೆ ಹೆಣ್ಣು ತರುವಾಗ ಸಾಮಾನ್ಯವಾಗಿ ಕುರುಬರ ಕುಲದ ಹೆಣ್ಣನ್ನೇ ತಂದುಕೊಳ್ಳುತ್ತಾರೆ. ಹಾಗೆ ಮಾಡುವಾಗಲೂ ಸಹ "ಶುದ್ದಿ" ಮಾಡುತ್ತಾರೆ. ಹೆಣ್ಣಿಗೆ ಗೋವಿನ ಗಂಜಲ ಕುಡಿಸಿ, ಬೇವಿನ ಕಡ್ಡಿಯಿಂದ ನಾಲಿಗೆ ಸುಡಿಸಿ ಅರಳಿಕಡ್ಡಿಯ ಕೆಂಡವನ್ನು ಅವಳ ಬೊಗಸೆಗೆ ಹಾಕಿ ಶುದ್ದಳಾದ ಒಡೆಯರ ಮನೆ ಒಸ್ತಿಲು ತುಳಿದ ಮೇಲೆ ಸೊಸೆಯಾಗುತ್ತಾಳೆ. ಒಡೆಯರ ಸೊಸೆಯೂ ಕೂಡ ತವರು ಮನೆಯಲ್ಲಿ ಆಹಾರ ಪಾನೀಯಗಳನ್ನು ಸ್ವೀಕರಿಸುವಂತಿಲ್ಲ. ಹೀಗೆ ವಿಶಿಷ್ಟ ಬಗೆಯ ಆಚರಣೆಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ಗೊರವರು ತಂತಮ್ಮ ಸಮುದಾಯ ಮತ್ತು ಕುಲಗಳಿಗೆ ಸಂಬಂಧಿಸಿದ ಆಚರಣೆಗನ್ನು ಪಾಲಿಸಿಕೊಂಡು ಬರುತ್ತಿದ್ದಾರೆ.

**ಮರಣ ಸಂಸ್ಕಾರ**

ಕರ್ನಾಟಕದ ಗೊರವರಲ್ಲಿ ಗೊರವರು ಸತ್ತಾಗ ಗೊರವರಿಗೆ ದೀಕ್ಷೆ ನೀಡುವಾಗ ಏನೆಲ್ಲಾ ವಿಧಿಗಳು ಅನುಸರಿಸುತ್ತಾರೋ ಅದೇ ವಿಧಿಗಳನ್ನೇ ಪುನರಾವರ್ತಿಸುತ್ತಾರೆ. ಆದರೆ ಪಟ್ಟಕ್ಕೆ ಕೂರಿಸುವಾಗ ಮಾತ್ರ ನಾಲ್ಕು ಮೂಲೆಯಲ್ಲಿ ಕಳಶಕ್ಕೆ ಕಟ್ಟಿದ ಸೂತ್ರಗಳನ್ನು ಕಿತ್ತುಹಾಕುತ್ತಾರೆ. ಪಟ್ಟಕ್ಕೆ ಕೂರಿಸಿದ ಶವದ ಕತ್ತಿನಲ್ಲಿರುವ ಪಗಡೆ ಬಿಚ್ಚಿ ಸೂತಕ ಕಳೆಯುವವರೆಗೂ ಮನೆಯ ಮಾಡಿನ ಮೇಲಿರಿಸುತ್ತಾರೆ. ಸತ್ತ ಗೊರವನ ಶವವನ್ನು ತಂದೆ ತಾಯಂದಿರು ಸಹ ಮುಟ್ಟುವಂತಿಲ್ಲ. ಪ್ರತಿಯೊಂದು ವಿಧಿಯನ್ನೂ ಗೊರವರೇ ಕೈಗೊಳ್ಳಬೇಕು. ಬಿದಿರು ತೆಂಗಿನ ಸೋಗೆಗಳಿಂದ ಚಟ್ಟ ಕಟ್ಟಿ ಅದರ ಮೇಲೊಂದು ಮಂಟಪ ಕಟ್ಟಿ ಸಿದ್ದಪಡಿಸಿದ ಮೇಲೆ ಶವಕ್ಕೆ ನೂರೊಂದು ಮೊಗೆ ನೀರು ಹೂಯ್ದು ವಿಭೂತಿ ಭಂಡಾರಗಳಿಂದ ಅಲಂಕರಿಸಿ ಪಟ್ಟಕ್ಕೆ ಕೂರಿಸುತ್ತಾರೆ.

ವಿಧ್ಯುಕ್ತವಾಗಿ ಕರ್ಮಾದಿನಗಳನ್ನು ಆಚರಿಸಿದ ಮೇಲೆ ಶವವನ್ನು ಚಟ್ಟದ ಮೇಲೆ ಮಲಗಿಸಿ ಇಲ್ಲವೆ ಮಂಟಪದಲ್ಲಿ ಕೂರಿಸಿ ಸ್ಮಶಾನಕ್ಕೆ ಕೊಂಡೊಯ್ಯುತ್ತಾರೆ. ಶವವನ್ನು ಸಹ ಗೊರವರೇ ಹೋರಬೇಕು, ಆರಾಧ್ಯ ದೈವದ ನಾಮಸ್ಮರಣೆ ಮಾಡುತ್ತಾ ಮಣ್ಣಿಗೆ ಇಲ್ಲವೆ ಬೆಂಕಿಗೆ ಕೊಟ್ಟು ವಾಪಸ್ಸು ಬರುವಾಗ ದಾರಿಯಲ್ಲಿ ಯಾವುದಾದರೂ ಹಳ್ಳಕ್ಕೋ ಹೋಗಿ ತಲೆಯ ಮೇಲೆ ನೀರು ಹಾಕಿಕೊಳ್ಳುತ್ತಾರೆ. ಹೆಣ ಮುಟ್ಟಿಸಿಕೊಂಡಿದ್ದವರು ಸ್ನಾನ ಮಾಡುತ್ತಾರೆ. ಸತ್ತವರ ಮನೆಯಲ್ಲಿ ಒಲೆ ಹಚ್ಚುವಂತಿಲ್ಲವಾದ್ದರಿಂದ ಊರಿನ ಇತರರು ಕರೆದು ಅಡಿಗೆ ಮಾಡಿ ಬಡಿಸುತ್ತಾರೆ. ಹನ್ನೊಂದನೆಯ ದಿನದ ಸೂತಕ ಕಳೆದ ಹಿರಿಯ ಗೊರವರನ್ನು ಕರೆಯಿಸಿ ಮನೆಯ ಮಾಡಿನ ಮೇಲಿರಿಸಿದ ಪಗಡೆಯನ್ನು ತುಪ್ಪ, ಜೇನುತುಪ್ಪದಲ್ಲಿ ನಡೆಸಿ ಬೇವಿನಕಡ್ಡಿ, ಅರಳಿಕಡ್ಡಿ, ಮಾವಿನಕಡ್ಡಿಗಳನ್ನು ಸುಟ್ಟು ಬೂದಿ ಮಾಡಿ ಅದನ್ನು ಪಗಡೆಯೊಂದಿಗೆ ದೇವರ ಮನೆಯಲ್ಲಿರಿಸುತ್ತಾರೆ. ಸತ್ತ ಗೊರವರಿಗೆ  ಗುಡ್ಡರಾಗದ ಗಂಡು ಮಕ್ಕಳಿದ್ದರೆ ಅದೇ ಪಗಡೆಯನ್ನು ಮುಂದೆ ಗಂಡು ಮಗನಿಗೆ ದೀಕ್ಷೆ ಕೊಡುವಾಗ ಅವನ ಕೊರಳಿಗೆ ಕಟ್ಟಬಹುದು.

**ಗೊರವರ ಧಾರ್ಮಿಕ ಆಚರಣೆಗಳು**

ಗೊರವರು ಮೂಲತಃ ಭಕ್ತ ಪರಂಪರೆಗೆ ಸೇರಿದವರಾದುದರಿಂದ ಹಾಗೂ ಇವರ ವಾರ್ಷಿಕ ಆಚರಣೆಗಳಲ್ಲಿ ಹಬ್ಬ ಮತ್ತು ಉತ್ಸವ ಸಂಬಂಧಿ ಆಚರಣೆಗಳನ್ನು ಬಿಟ್ಟರೆ ಮತ್ಯಾವ ಆಚರಣೆಗಳು ಕಾಣಸಿಗುವುದಿಲ್ಲ. ಹಬ್ಬ ಮತ್ತು ಉತ್ಸವ ಸಂಬಂಧಿ ಆಚರಣೆಗಳ ಕೇಂದ್ರಬಿಂದು ಸಹ ಮೈಲಾರಲಿಂಗ, ಅವನ ಪತ್ನಿಮತ್ತು ಪುತ್ರರೆ ಆಗಿದ್ದು, ಅವರುಗಳ ಸುತ್ತಲೇ ಆಚರಣೆಗಳು ಗಿರಕಿ ಹೊಡೆಯುತ್ತವೆ. ಕರ್ನಾಟಕ ಒಂದರಲ್ಲೆ ಮೈಲಾರಲಿಂಗನ ಹನ್ನೆರಡು ಕ್ಷೇತ್ರಗಳಿದ್ದು, ಪ್ರತಿಯೊಂದು ಕ್ಷೇತ್ರದಲ್ಲೂ ವೈವಿಧ್ಯಮಯವಾದ ಹಬ್ಬಗಳು ಸಮೃದ್ಧವಾಗಿ ಆಚರಿಸುತ್ತಾರೆ. ಇದರಿಂದಾಗಿ ಗೊರವರಲ್ಲಿ ಕಂಡು ಬರುವಷ್ಟು ಹಬ್ಬಗಳಾಗಲಿ, ಅದಕ್ಕೆ ಸಂಬಂಧಪಟ್ಟ ಆಚರಣೆಗಳಾಗಲಿ, ಮತ್ತಾವ ಸಂಸ್ಕೃತಿಯಲ್ಲೂ ಇಷ್ಟೊಂದು ಸಮೃದ್ಧವಾಗಿ ಕಂಡುಬರುವುದಿಲ್ಲ.

ದೇವರನ್ನು ಅಮೂರ್ತವಾಗಿ ಕಾಣಲು ಬಯಸದ ಜನಪದರು ಹಿಂದಿನಿಂದಲೂ ಅನೇಕ ಬಗೆಯ ಮೂರ್ತರೂಪಗಳಲ್ಲಿ ಕಂಡಿರಿಸಿ ತೃಪ್ತಿ ಹೊಂದುವ ಪ್ರಯತ್ನ ನಡೆಸುತ್ತಾ ಬಂದಿದ್ದಾರೆ. ದೇವರುಗಳ ಅಲೌಕಿಕ ಆವರಣವನ್ನು ಕಳಚಿ ಲೌಕಿಕಕ್ಕೆ ಎಳೆ ತಂದಿದ್ದಾರೆ. ದೇವರುಗಳೊಂದಿಗೆ ಮನುಷ್ಯನು ಬೆಳಸಿಕೊಂಡ ಆತ್ಮೀಯತೆಯನ್ನು ವೈಯಕ್ತಿಕವಾಗಿ, ಸಾರ್ವತ್ರೀಕವಾಗಿ ಪ್ರಕಟಿಸುವ ಸಾಂಸ್ಕೃತಿಕ ಸಾಧನಗಳಾಗಿ ಹಬ್ಬ, ಉತ್ಸವಗಳು ಕಂಡುಬರುತ್ತವೆ. ಈ ಆಚರಣೆಗಳಿಂದಾಗಿ ಭಕ್ತಿ, ನಿಷ್ಠೆಗಳು ಗಾಢವಾಗುತ್ತಾ ಬರುತ್ತವೆ. ಸಾಮಾಜಿಕ ಸೌಹಾರ್ದತೆ ಏರ್ಪಡುತ್ತದೆ. ಭಾವೈಕ್ಯತೆ ಸಾಧ್ಯವಾಗುತ್ತದೆ.ಈ ದಿಕ್ಕಿನಲ್ಲಿ ಗೊರವರ ಧಾರ್ಮಿಕ ಬದುಕು ಅವರ ಆರಾಧ್ಯ ದೈವವಾದ ಮೈಲಾರಲಿಂಗನೊಂದಿಗೆ ಗೊರವರ ಪಾತ್ರ ಹಿರಿದಾಗಿದೆ. ಮೊದಲಿಗೆ ಪ್ರತಿ ವರ್ಷ ಯುಗಾದಿ ಮತ್ತು ದೀಪಾವಳಿ ಪಾಡ್ಯಗಳಲ್ಲಿ ಮೈಲಾರಲಿಂಗನ ಪಡ್ಡಣಗಿ ಕಾರ್ಯಕ್ರಮ ನಡೆಯುತ್ತದೆ. ಅಂದರೆ ಹಡದೆ ಕೊಡುವ ಕಾರ್ಯಕ್ರಮ ಅಂದು ಊರಲ್ಲಿರುವ ಎಲ್ಲಾ ದೇವರೂಗಳಿಗೂ ಮೈಲಾರಲಿಂಗನ ಪರವಾಗಿ ಪೂಜೆ ಏರ್ಪಡುತ್ತದೆ. ಈ ಆಚರಣೆಯನ್ನು "ಪಡ್ಡಣಗಿ" ಎಂದು ಕರೆಯುತ್ತಾರೆ. ಆಯಾ ದೇವರುಗಳಿಗೆ ಸಲ್ಲುವಂತೆ ಮೈಲಾರಲಿಂಗನು ತನ್ನ ಪರವಾಗಿ ಹಡದೆಯನ್ನು ಒಪ್ಪಿಸುವುದು.

ನವರಾತ್ರಿಯಲ್ಲಿ ಕುಂಭ ಸ್ಥಾಪನೆ ಮಾಡಿ ಮೈಲಾಲಿಂಗನಿಗೆ ಪಲ್ಲಕ್ಕಿ ಸೇವೆ ನಡೆಸಿದರೆ ಖಂಡೆ ನವಮಿಯಂದು ಆಯುಧ ಪೂಜೆ ಮಾಡಿ ಮಂಗಳಾರತಿ ಮುಗಿಸುತ್ತಾರೆ.

**ಹರಕೆಗಳು**

ಅಗೋಚರ ಶಕ್ತಿಗೆ ಧಾರ್ಮಿಕ ವ್ಯವಸ್ಥೆಯ ಪರಿವೇಷ ತೋಡಿಸಿ ತಮ್ಮ ಇಚ್ಚೆಗಳನ್ನು ಪೂರೈಸಿವುದಕ್ಕಾಗಿ ಅದನ್ನು ಬಳಸಿಕೊಳ್ಳವುದು ಮೊದಲಿನಿಂದಲೂ ಕಂಡುಬರುವ ವಿಷಯವಾಗಿದೆ. ಮನುಷ್ಯ ತನ್ನ ಬಯಕೆಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರ ಮತ್ತು ತೊಂದರೆಗಳನ್ನು ನೀಗಿಸಿಕೊಳ್ಳಲು ಯತ್ನಿಸುತ್ತಾರೆ. ಗೊರವರ ಸಂಸ್ಕೃತಿಯಲ್ಲಿ ಕಂಡುಬರುವ ಹರಕೆಗೆಳ ಕೂಡ ತುಂಬಾ ವಿಶಿಷ್ಟವಾಗಿದೆ.

**ಜನಿಗಿ ಹರಕೆ**

ಮನೆಯಲ್ಲಿ ಎಲ್ಲಾ ಕಾರ್ಯಗಳು ಯಶಸ್ವಿಯಾಗಲಿ ಮತ್ತು ಸಮೃದ್ದಿಯಾಗಲಿ ಎಂದು ದೇವರಲ್ಲಿ ಹರಕೆ ಹೊರುತ್ತಾರೆ. ಈ ಹರಕೆಯ ವಿಶಿಷ್ಟತೆಯೆಂದರೆ ದನಕರು, ಕುರಿಗಳನ್ನು ದೇವರ ಹೆಸರು ಹೇಳಿ ಗರ್ಭದಲ್ಲಿಯೇ ಬಿಡುತ್ತಾರೆ. ಹಾಗೆ ಹರಕೆಗೆ ಬಿಟ್ಟ ಯಾವುದೇ ಪ್ರಾಣಿಯನ್ನು ಮಾರಟ ಮಾಡುವುದಾಗಲಿ, ಹೊಡೆಯುವುದಾಗಲಿ, ತಿನ್ನುವುದಾಗಲಿ ಮಾಡುವಂತಿಲ್ಲ, ಅದರ ಉತ್ಪನ್ನಗಳನ್ನು ಅಂದರೆ ಹಾಲು, ಮೊಸರು, ಬೆಣ್ಣೆ, ತುಪ್ಪ ಇತ್ಯಾದಿಗಳನ್ನು ಹೊರಗಿನವರಿಗೆ ಕೊಡುವಂತಿಲ್ಲ. ಹಾಗೂ ಹರಕೆಗೆ ಬಿಟ್ಟ ಪ್ರಾಣಿಯು ತಿನ್ನುವ ವಸ್ತುವನ್ನು ಬಾಯಿಂದ ಕಸಿದುಕೊಳ್ಳುವಂತಿಲ್ಲ. ಚೆನ್ನಾಗಿ ಬೆಳೆದ ಮೇಲೆ ದೇವರಿಗೆ ಅರ್ಪಿಸಬೇಕು, ಗೊರವರು ಹೋರಿ, ಕುರಿ, ಆಕಳು, ಎಮ್ಮೆ ಮುಂತಾದ ಪ್ರಾಣಿಗಳನ್ನು ಹರಕೆಗೆ ಬಿಡುತ್ತಾರೆ. ದೇವರಿಗೆ ಬೆಳ್ಳಿಯ ಕುದುರೆ, ಕಟ್ಟಿಗೆಯ ಕುದುರೆ ಅರ್ಪಿಸುವ ಹರಕೆ ಹೊರುವುದು ಉಂಟು.

**ಮೀಸಲು ತುಪ್ಪದ ಹರಕೆ:**

ಮನೆಯಲ್ಲಿ ಬೆಣ್ಣೆ ತೆಗೆದು ಮಜ್ಜಿಗೆ ಕೂಡಾ ಹೊರವನರಿಗೆ ಕೊಡದೆ ತುಪ್ಪ ಕಾಯಿಸಿ ನೆಲದ ಮೇಲಿಡದೆ ನೆಲುವಿನ ಮೇಲಿಟ್ಟು ದೇವರಿಗೆ ಮುಟ್ಟಿಸುವುದು ಪದ್ಧತಿಯೇ ಮೀಸಲು ತುಪ್ಪದ ಹರಕೆ.ತುಪ್ಪದ ಮಾಳಮ್ಮನಿಗೆ ತಲೆಯಿಂದ ಪಾದದವರೆಗೆ ಮೀಸಲು ತುಪ್ಪ ಎರೆಯುವ ಹರಕೆ ಒಪ್ಪಿಕೊಳ್ಳುತ್ತಾರೆ, ಈ ಮೀಸಲು ತುಪ್ಪವನ್ನು ದೀಪಕ್ಕೆ ಹಾಕಿ ಉರಿಸುವುದರಿಂದ "ಮೀಸಲು ದೀಪದ ಹರಕೆ" ಎಂಬುದೂ ಉಂಟು.

**ದೇವರಿಗೆ ಗುಡ್ಡರ ಬಿಡುವುದು**

ಮಕ್ಕಳಾಗದಿದ್ದಾಗ ಆದ ಮಕ್ಕಳು ಬದುಕಿ ಉಳಿಯದಿದ್ದಾಗ ಮೈಲಾರಲಿಂಗನಿಗೆ ಗೊರವ ಬಿಡುತ್ತೇವೆಂದು ಹರಸಿಕೊಳ್ಳುತ್ತಾರೆ. ಹರಕೆ ಕಟ್ಟಿದ ಮೇಲೆ ಹುಟ್ಟಿದ ಮಕ್ಕಳನ್ನು ಗಂಡಾಗಲಿ ಹೆಣ್ಣಾಗಲಿ ದೇವರಿಗೆ, ದೇವರ ಸೇವೆಗೆ ಅರ್ಪಿಸುತ್ತಾರೆ.

**ಇಡಿಗಾಯಿ ಹರಕೆ**

ಮನೆಯಲ್ಲಿ ಯಾರ ಮೇಲಾದರೂ ಮಾಟದ ಪ್ರಯೋಗವಾಗಿದೆ ಎಂಬುದು ಗಮನಕ್ಕೆ ಬಂದಾಗ ಈ ಮಾಟದ ಪರಿಹಾರಕ್ಕಾಗಿ ಹೆಗ್ಗಪ್ಪನಿಗೆ ಇಡಿಗಾಯಿ ಹರಕೆ ಹೊರುತ್ತಾರೆ. ದೇವರ ಗುಡಿಯ ಬಾಗಿಲಲ್ಲಿ ನಿಂತು ಒಳಗಿರುವ ಮೂರ್ತಿಗೆ ತಾಗುವಂತೆ ಇಡಿಯಾದ ತೆಂಗಿನ ಕಾಯಿಯನ್ನು ಉರುಳಿಸಿ ಬಿಡುತ್ತಾರೆ.

**ಮುಡಿ ಕೊಡುವುದು**

ಸಾಮಾನ್ಯವಾಗಿ ಎಲ್ಲಾ ಸಂಪ್ರದಾಯಗಳಲ್ಲಿಯೂ ಕಂಡು ಬರುವ ಹರಕೆಯಿದು.ತಲೆ ಮುಡಿ ಕೊಡುವ ಪದ್ದತಿ ಇವರಲ್ಲಿಯೂ ಸಹ ಇದೆ ಮನೆಯಲ್ಲಿ ತೊಂದರೆಗಳು ಸಂಭವಿಸಿದಾಗ ತಲೆಗೂದಲನ್ನು ದೇವರಿಗೆ ಅರ್ಪಿಸುತ್ತಾರೆ. ಅಲ್ಲದೆ ಹುರುಕು ಕಜ್ಜಿಗಳಾದವರು ದೇವರ ಗುಡ್ಡದ ಮೈಲಾರಲಿಂಗ ದೇವಸ್ಥಾನದ ಮುಂದಿರುವ ಕೆಲವು ಶಿಲಾಮೂರ್ತಿಗಳ ಮೇಲೆ ಉಪ್ಪು ಸುರಿಯುವುದಾಗಿ ಹರಕೆ ಹೊರುತ್ತಾರೆ. ದೇವರಿಗೆ ಶಿಬಾರ ದೀಪ ಮಲ್ಲ ಸ್ತಂಭಗಳನ್ನು ಮಾಡಿಸಿಕೊಡುವುದು, ಮೈಲಾರದ ಮೃಣ್ಮಯ ಮೂರ್ತಿಗೆ ಎಣ್ಣೆಮಜ್ಜನ ಮಾಡಿಸುವುದು, ಗೊರವರಿಗೆ ಕೋರಿ ಅಂಗಿ, ದೋಣಿ, ಗಂಟೆ ಮಾಡಿಸುವುದು, ಹಣ್ಣುಪ್ಪ ಮಾಡುವುದು, ದಿಂಡುರುಳು ದೀಪ ನಮಸ್ಕಾರ ಮುಂತಾದ ಹರಕೆಗಳನ್ನು ಹೊರುವುದು ಸಾಮನ್ಯವಾಗಿ ರೂಢಿಯಲ್ಲಿದೆ.

**ನಿಷೇದಗಳು**

ಸಾಮಾಜದಲ್ಲಿ ಜನರು ಏನು ಮಾಡುತ್ತಾರೆ ಎಂಬುದ ಸಂಪ್ರದಾಯವಾದರೆ ಅದನ್ನು ಹೇಗೆ ಮಾಡುತ್ತಾರೆಂಬುದು ಆಚರಣೆಯಾಗಿದೆ. ಈ ಆಚರಣೆಯಲ್ಲಿ ಏನನ್ನು ಮಾಡಬಾರದು ಎನ್ನುವುದನ್ನು ತಿಳೀಸುವುದೇ ನಿಷೇಧವಾಗಿದೆ. ಧಾರ್ಮಿಕ ಅಥವ ಸಾಂಸ್ಕೃತಿಕ ಆಚರಣೆಯ ಸಂದರ್ಭದಲ್ಲಿ ಕೆಲವು ವಸ್ತುಗಳನ್ನು, ಕೆಲವು ವ್ಯಕ್ತಿಗಳನ್ನು ಮುಟ್ಟುವಂತಿಲ್ಲ, ಕೆಲವು ಪಾನೀಯಗಳನ್ನು ಕುಡಿಯುವಂತಿಲ್ಲ, ಕೆಲವು ಮಾತುಗಳನ್ನು ಆಡುವಂತಿಲ್ಲ, ಕೆಲವು ಸ್ಥಳಗಳಿಗೆ ಪ್ರವೇಶಿಸುವಂತಿಲ್ಲ, ಕೆಲವು ಆಚರಣೆಯಲ್ಲಿ ಕಂಡುಬರುವ ಈ ನಿಷೇಧಾತ್ಮಕ ವಿಧಾನಗಳೇ ನಿಷೇಧಗಳು. ಗೊರವರು ಈ ನಿಷೇಧಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾರೆ. ಗೊರವರ ಪ್ರಮುಖ ನಿಷೇಧಗಳನ್ನು ಇಲ್ಲಿ ಚರ್ಚಿಸಲಾಗಿದೆ.

**ಗೊರವರ ದೋಣಿಗೆ ನೀಡಿದ ಆಹಾರವನ್ನು ಹೊರ ಚೆಲ್ಲುವಂತಿಲ್ಲ ಮಾಂಸಹಾರವನ್ನು ದೋಣಿಗೆ ಹಾಕುವಂತಿಲ್ಲ.**

ದೋಣಿ ದೇವರ ಸಂಕೇತ. ಗೊರವರ ಧಾರ್ಮಿಕ ಲಾಂಛನವಾದ ದೋಣಿಯನ್ನು ಪರಿಶುದ್ಧವಾದ ಬಟ್ಟಲು ಎಂದು ನಂಬಿದ್ದಾರೆ. ಮಲ್ಲಾಸುರನ ತಲೆಬುರುಡೆ ಎಂಬ ಐತಿಹ್ಯವೂ ಪ್ರಚಲಿತದಲ್ಲಿದೆ. ಪವಿತ್ರವಾದ ಈ ದೋಣಿಯಲ್ಲಿ ವಿಷವಿಕ್ಕಿದ್ದರೂ ಅಮೃತವಾಗುವುದೆಂಬ ನಂಬಿಕೆ ಗೊರವರಲ್ಲಿ ಇದೆ. ದೋಣಿಗೆ ನೀಡಿದ್ದು ಮೈಲಾರಲಿಂಗನಿಗೆ ಸಲ್ಲುತ್ತದೆಂದು ಭಕ್ತರು ಭಾವಿಸುತ್ತಾರೆ. ಆದ್ದರಿಂದ ಇದರಲ್ಲಿ ನೀಡಿದ ಆಹಾರ ಪದಾರ್ಥಗಳನ್ನು ಗೊರವರು ಪೂರಾ ಉಣ್ಣಲೇಬೇಕು. ಹೆಚ್ಚಾಯಿತೆಂದು ಹೊರ ಚೆಲ್ಲಿದರೆ ನಂಬಿಕೆಯ ಉಲ್ಲಂಘನೆಯಾಗಿ ಅಪವಿತ್ರವಾಯಿತೆಂದು ಭಾವಿಸುತ್ತಾರೆ. ದೋಣಿಗೆ ನೀಡಿದ್ದನ್ನು ಭಕ್ತರು ಪ್ರಸಾದವೆಂದು ಗೊರವರಿಂದ ಸ್ವೀಕರಿಸಿವುದೂ ಉಂಟು. ಪವಿತ್ರವಾದುದರಿಂದ ಮಾಂಸಹಾರದಂತಹ ಮೈಲಿಗೆ ಪದಾರ್ಥಗಳನ್ನು ದೋಣಿಗೆತುಂಬುವಂತಿಲ್ಲ. ತಿನ್ನುವ ಗೊರವರಿದ್ದರೂ ಸಹ ಅದನ್ನು ನೀಡಿಕೊಳ್ಳುವುದಿಲ್ಲ: ನೀಡುವಂತೆಯೂ ಇಲ್ಲ.

**ಭಂಡಾರ ಬಟ್ಟಲನ್ನು ಪೂಜಿಸುವ ಹೊರತು ಗೊರವರು ಊಟ ಮಾಡುವಂತಿಲ್ಲ.** ಭಂಡಾರ ಗೊರವರ ಧಾರ್ಮಿಕ ಲಾಂಛನಗಳಲ್ಲಿ ಒಂದು.ಭೂಮಿಯಲ್ಲಿ ಮೊದಲು ಹುಟ್ಟಿದ್ದೇ ಭಂಡಾರ.ಇದರಿಂದ ಸ್ವಯಂ ಭೂಲಿಂಗಕ್ಕೆ ಆದಿ ಪೂಜೆಯಾಯೊತೆಂದು ಗೊರವರು ನಂಬುವುದರಿಂದ ಭಂಡಾರ ಬಟ್ಟಲನ್ನು ಪೂಜಿಸಿದ ಮೇಲೆ ಗೊರವರು ಊಟ ಮಾಡುವುದನ್ನು ರೂಢಿಸಿಕೊಂಡಿದ್ದಾರೆ.

**ಭಾರತ ಹುಣ್ಣಿಮೆ ದಿನಗಳಲ್ಲಿ ಗೊರವರು ಮಂಚದ ಮೇಲೆ ಮಲುಗುವಂತಿಲ್ಲ**

ಯಾದವಗಿರಿ ಮಲ್ಲಯ್ಯನ ಕ್ಷೇತ್ರದಲ್ಲಿ ಭಾರತ ಹುಣ್ಣಿಮೆಯಂದು ಬೆಳದಿಂಗಳಿನಲ್ಲಿ ದೇವಸ್ಥಾನದ ಹೊರಗೆ ಮಂಚವೊನ್ನಿಟ್ಟು ಅದರ ಮೇಲೆ ದೇವರನ್ನು ಸ್ಥಾಪಿಸುತ್ತಾರೆ ಮತ್ತು ಪೂಜೆ ಸಲ್ಲಿಸುತ್ತಾರೆ ಮತ್ತು ಪೂಜೆ ಮಾಡುತ್ತಾರೆ. ದೇವರು ಮಂಚದ ಮೇಲೆ ಪವಡಿಸುವ ಈ ಕಾರ್ಯಕ್ರಮ ಅಂಗವಾಗಿ ಗೊರವರ ಈ ದಿನಗಳಲ್ಲಿ ಮಂಚದ ಮೇಲೆ ಮಲುಗುವುದಿಲ್ಲ. ಇದೊಂದು ಪ್ರಾದೇಶಿಕ ನಿಷೇಧ.ಈ ಕ್ಷೇತ್ರದಲ್ಲಿಯೂ ಗೊರವರು ಮಾತ್ರ ಈ ನಿಷೇಧವನ್ನು ಪಾಲಿಸುತ್ತಾರೆ.

**ಜಡೆ ಇರುವ ಚಿಕ್ಕಮಕ್ಕಳು ಮತ್ತು ಸ್ತ್ರೀಯರಿಗೆ ಗರ್ಭಗೃಹ ಪ್ರವೇಶವಿಲ್ಲ**

ಸ್ತ್ರೀಯರ ಪ್ರವೇಶಕ್ಕೆ ಮೈಲಿಗೆ ಕಾರಣವಾದರೆ, ಚಿಕ್ಕ ಮಕ್ಕಳ ಪ್ರವೇಶವನ್ನು ನಿಷೇಧಿಸುವದಕ್ಕೆ ರುದ್ರಭಯಂಕರವಾದ ಬೈರವ ರೂಪ ಕಾರಣವಾಗಿದ್ದಿರಬಹುದು.

**ಜಾತ್ರೆಗೆ ಕಾಲಲ್ಲಿ ಚಪ್ಪಲಿ ಧರಿಸುವಂತಿಲ್ಲ.**

ಗೊರವರು ದೀಕ್ಷೇ ಪಡೆದುಕೊಳ್ಳುವಾಗ ಮೈಲಾರಲಿಂಗನ ಹೆಸರಿನಲ್ಲಿ ಕಾಲಿಗೆ ಎಕ್ಕಡ ಧರಿಸುವುದಿಲ್ಲ ಎಂದು ಪ್ರಮಾಣ ವಚನ ಸ್ವೀಕರಿಸುತ್ತಾರೆ. ಅದರಂತೆ ದೇವರ ಜಾತ್ರೆ ಉತ್ಸವವಾದಿಗಳ ಸಂದರ್ಭದಲ್ಲಿ ಕಾಲಿಗೆ ಚಪ್ಪಲಿ ಧರಿಸಿ ಓಡಾಡುವುದಿಲ್ಲ.

**ಗೊರವರು ದೇವರ ಮುಂದೆ ಹಚ್ಚಿದ ದೀಪ ಆರಕೂಡದು.**

ಅಡಿಗೆಗೆ ಹತ್ತಿಸಿದ ಉರಿ ಆರುವಂತಿಲ್ಲ. ಉರಿದ ಉರಿಯನ್ನು ಮತ್ತೆ ಊದಿ ಹೊತ್ತಿಸಕೂಡದು. ಇದೂ ಸಹ ಪ್ರಾದೇಶಿಕ ನಿಷೇಧವಾಗಿದ್ದು ಮೈಲಾರಲಿಂಗನ ಮಕ್ಕಳಾದ ಚಿಕ್ಕಯ್ಯ ಜುಂಜಯ್ಯನ ಆಚರಣೆಯಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಆರಾಧನೆಯ ಸಂದರ್ಭದಲ್ಲಿ ಮಡಿ ಮಾಡಿಕೊಂಡು ಬಂದ ಗೊರವನು ದೇವರ ಮುಂದೆ ದೀಪ ಸ್ಥಾಪನೆ ಮಾಡಿ ಆಚರಣೆಯ ಎಲ್ಲಾ ವಿಧಾನಗಳು ಮುಗಿಯುವವರೆಗೂ ಮೂಗು ಬಾಯಿಗೆ ಬಟ್ಟೆ ಕಟ್ಟಿಕೊಂಡು ದೀಪವು ಆರಿ ಹೋಗದಂತೆ ಕಾಯುತ್ತಾ ಕೊರುತ್ತಾನೆ. ಇವನನ್ನು ದೀಪ ಕಾಯುವ ಗೊರವರು ಎಂದು ಕರೆಯುತ್ತಾರೆ. ಆರಾಧನೆಗೆ ಬೇಕಾದ ಸಿಹಿ ಅಡುಗೆ ತಯಾರಿಸಲು ಗೊರವರು ಒಮ್ಮೆ ಹೊತ್ತಿಸಿದ ಉರಿ ಆರುವಂತಿಲ್ಲವಾದ್ದರಿಂದ ಸುಲಭವಾಗಿ ಹೊತ್ತಿಕೊಳ್ಳಲು ಅನುಕೂಲವಾಗುವಂತೆ ಪುಂಡಿ ಕಟ್ಟಿಗೆಯನ್ನು ಬಳಸುತ್ತಾರೆ.

**ದೇವರ ಲಗ್ನದ ತರುವಾಯ ಗೊರವರು ಮದುವೆ ಮಾಡಿಕೊಳ್ಳುವಂತಿಲ್ಲ.**

ಮೈಲಾರ ದೇವರ ಗುಡ್ಡಗಳ ಆಜುಬಾಜಿನಲ್ಲಿರುವ ಗೊರವರು ಈ ನಿಷೇಧವನ್ನು ಅನುಸರಿಸುತ್ತಾರೆ. ಮೈಲಾರದಲ್ಲಿ ದೇವರ ಲಗ್ನ ಆಗೀ ಹುಣ್ಣಿಮೆಯಲ್ಲಾದರೆ. ದೇವರ ಗುಡ್ಡರಲ್ಲಿ ಕಾರಹುಣ್ಣಿಮೆಗೆ ನಡೆಯುತ್ತದೆ.ದೇವರು ಮದುವೆ ಮಾಡಿಕೊಂಡ ನಂತರ ಲಗ್ನವಾಗುದು ಪ್ರಶಸ್ತವು ಶುಭವು ಅಲ್ಲ ಎಂಬ ಕಾರಣದಿಂದ ಮೈಲಾರಲಿಂಗನ ಒಕ್ಕಲುಗಳಲ್ಲಿ ಕಾರಹುಣ್ಣಿಮೆಯ ನಂತರ ಲಗ್ನ ಇರುವುದಿಲ್ಲ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಗೊರವರ ಸಾಂಸ್ಕೃತಿಕ, ಧಾರ್ಮಿ ಆಚರಣೆ, ನಂಬಿಕೆ ಮತ್ತು ನಿಷೇಧಗಳು ವಿಶಿಷ್ಟವಾಗಿದೆ.ಗೊರವರ ಅನನ್ಯತೆಯಾಗಿದೆ.ಗೊರವ ಕಲಾವಿದರು ಕರ್ನಾಟಕದ ಅತ್ಯಂತ ಉತ್ಕೃಷ್ಟ

ವೃತ್ತಿಗಾಯಕರು ಮತ್ತು ನೃತ್ಯಗಾರರು. ಇವರು ಹತ್ತಾರು ಖಂಡ ಕಾವ್ಯಗಳನ್ನು ಹಾಡಿದವರು.ಮೈಲಾರ ಲಿಂಗನ ಮಹಿಮೆ, ಮೈಲಾರ ಲಿಂಗನ ಪವಾಡ ಹಾಗೂ ಪ್ರಣಯ ಪ್ರಸಂಗಗಳನ್ನು ಒಳಗೊಂಡ ಮೈಲಾರಲಿಂಗನ ಕಾವ್ಯ ಗೊರವರ ಬಳುವಳಿಯಾಗಿದೆ. ಇಂತಹ ವಿಶಿಷ್ಟವಾದ ಕಲೆ ಇತ್ತೀಚಿನ ದಿನಗಳಲ್ಲಿ ಅಳಿವಿನಂಚಿನಲ್ಲಿದ್ದು, ಈ ನಿಟ್ಟಿನಲ್ಲಿ ಸಂಶೋಧಕರು, ತಜ್ಞರು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಇದರ ಸಂರಕ್ಷಣೆಗೆ ಕಾರ್ಯೋನ್ಮುಖರಾಗಬೇಕಿದೆ.

**ವಕ್ತೃವಿವರ**

- ಬಾಲು. ವಯಸ್ಸು–40. ರಾಮಸಮುದ್ರ, ಚಾಮರಾಜನಗರ ಇವರಿಂದ ದಿನಾಂಕ 27/09/2020 ರಂದು ಸಂಗ್ರಹಿಸಿದ ಮಾಹಿತಿ
- ಶಿವಣ್ಣ, ವಯಸ್ಸು–45 ರಾಮಸಮುದ್ರ, ಚಾಮರಾಜನಗರ, ದಿನಾಂಕ 27/09/2020ರಂದು ಸಂಗ್ರಹಿಸಿದ ಮಾಹಿತಿ.

**ಪರಾಮರ್ಶನ ಗ್ರಂಥಗಳು**


- ಚಕ್ಕರೆ ಶಿವಶಂಕರ್. (1993). ಗೊರವರ ಸಂಸ್ಕೃತಿ. ಪ್ರಧಾನ ಸಂಪಾದಕರು ಬರಗೂರು ರಾಮಚಂದ್ರಪ್ಪ.
- ರಾಜಶೇಖರ್, ಪಿ.ಕೆ. (1996). ಚಾಮರಾಜನಗರ ಜಾನಪದ ಕಲೆಗಳು.
- ಹಿ.ಚಿ.ಬೋರಲಿಂಗಯ್ಯ. (2003). ಜಾನಪದ ಕಲೆಗಳ ಕೋಶ.
- ಜೀ. ಶಂ. ಪರಮಶಿವಯ್ಯ. ಮೈಲಾರನ ಗೊರವರು.
- ರಾಜಪ್ಪ ದಳವಾಯಿ. (1978). ಕನ್ನಡ ಸಾಹಿತ್ಯ ಕೋಶ.